ಮೈಸೂರ ಗೆಜೆಟ್

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 15, ಸ್ಯ 1885.

ಸೂಚನೆ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇವಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಳು ಮತ್ತೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನ್ಯಾಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸೂಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟಪಡುವ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಂಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟೂದ ಡಿವಾಂಡ್ ಡ್ರಾಫ್ಟ್ಸ್, ಯಿಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಂಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟಿನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 291.

ಮೃತಪಟ್ಟ ತುಮಕೂರು ತಾ॥ ಗೂಳೂರು ಸ್ಥಳದ ಸಿಲ್ಪಿ ನಂಜಪ್ಪ ಇವನ ಅಂಣ ಕರಿಬಸಪ್ಪ ಈ ಇಬ್ಬರ ಆಸ್ತಿ ವಿಷಯವಲ್ಲಿ—

ಅರ್ಜೀದಾರ್ ಅಕ್ಕಮ್ಮ ಬಸವ್ವ ಮೃತಪಟ್ಟ ಸದರೀ ನಂಜಪ್ಪ ಕರಿಬಸ್ಪನಿಗೆ ಹೆಂಡತೀರು ಆಗಬೇಕೆಂಬ ಹಕ್ಕುದಾರೀ ಮೇಲೆ ತುಮಕೂರು ತಾಲ್ಲೂಕು ಗೂಳೂರು ಸ್ಥಳದ ಅಕಮ್ಮ ಬಸವ್ವ ಸದರೀ ಗೂಳೂರು ವಾಸಸ್ಥರಾಗಿ ಮೃತಪಟ್ಟ ನಂಜಪ್ಪ ಕರಿಬಸಪ್ಪನವರ

ಬಿಂದಗಿ ಬಗ್ಯಾಗಿ ಬರತಕ್ಕ ಸುಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಕ್ಕಮ್ಮಬಸಮ್ಮ ಇವರ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟಿ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪ ಕಬಿಸಪ್ಪ ಇವರ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಆಗಸ್ಟ್ಟ ತಿಂಗಳು 7ನೇ ತಾರಿಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಜನೆ ಕೊಡೋಣಾಗಿಧೆ.

ಸಿ. ಕ್ರೈಸ್,
ಸಬ ಜಡ್ಜ.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 9ನೇ ಆಗಸ್ಟು 1885.

1885ನೇ ಇಸವಿ ಆಗಸ್ಟು ತಾರೀಖು 8ನೇ ಶನಿವಾರದ ದಿವಸ ಸೆಂಟ್ರಲ್ ಜೆಯಿಲ್ ತೋಟದಿಂದ ಫರಾರಿಯಾದ ಖೈದಿಯ ಜಹರೆಪಟ್ಟಿ.

ಜೈಲ್ ನಂಬರ್—7070. ಹೆಸರು ತಂದೆ ಹೆಸರು—ತಿಪ್ಪಿಗಾಡು ಯಂಬುವನ ಮಗ ನರಸಿಗ. ವರ್ತ—ಬಾಗೇನಹಳ್ಳಿ ತಾಲ್ಲೂಕು ದೇವರಾಜನವಲ್ಲಿ. ಜಾತಿ ಕಸಬು—ಪೇಡರ್ ಕೂಲಿ. ವಯಸ್ಸು ಯತ್ತರ—22 ವರುಷ 5 ಅಡಿ 3 ಅಂಗುಲ. ತಕಸೀರು ಸಜಾ ತಾರೀಖು ವಾಯಿದೆ ವಗೈರೆ—ಜೋರಿ ಯಿರಾದೆಯಿಂದ ರಾತ್ರೆ ಮನೆನುಗ್ಗಿದ ತಕಸೀರಿಗೆ 1885ನೇ ಇನವಿ ಜುಲೈ ತಾರೀಖು 15ರ ಲಾಗಾಯಿತು 6 ತಿಂಗಳು ಕಠಿಣ ಸಜಾ. ಸಜಾ ಕೊಟ್ಟ ಕೋರ್ಟು—ಕೋಲಾರದ ಜನರಲ್ ಅ|| ಕಮ್ಮಿಷನರವರ ಕೋರ್ಟು ಕೇಸ್ ನಂಬರ್ 31 ರಲ್ಲು. ಚಹರೆ ತಪಸೀಲ್—ಹೊಟ್ಟೆ ಮೇಲೆ 6 ಮಚ್ಚೆಗಳು, ಯಜತೊಡೆ ಪೊಳಪಾರ್ಶ್ವ 3, ಹೊರಪಾರ್ಶ್ವ 1 ಮಚ್ಚೆ, ಬಲಭುಜದ ಮೇಲೆ 2, ಯದೆಯ ಬಲಭಾಗದಲ್ಲಿ 3 ನೆರಹುಲಿಗಳಿವೆ. ಖೈದಿ ಉಡುಪಿನ ತಪಸೀಲು—ಖೈದಿ ಫರಾರಿ ಕಾಲದಲ್ಲಿ ಮೈಮೇಲೆ ಬಂದು ಚಡ್ಡಿ ಬಂದು ಟೋಪಿ ಇತ್ತು. ಷರಾ—ಫರಾರಿ ಖೈದಿಯನ್ನು ವಸ್ತಗಿರಿ ಮಾಡಿದವರಿಗೆ 20 ರೂಪಾಯಿ ಇನಾಂ ಕೊಡಲ್ಪಡುವದು.

ಹೆಚ್. ಹೆಚ್. ಸ್ಪಾರ್ಕಸ್,
ಸೂಪರಿಟೆಂಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 9ನೇ ಜುಲೈ 1885.

ಸ್ವ 1884—85ನೇ ಇಸವಿಯ ಬಡ್ಡಿ ಪೈಸಲ್ ಬಗ್ಯೆ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ಸಾಧ್ಯವಾದ ಮಟ್ಟಿಗೆ ಜಾಗ್ರತೆಯಲ್ಲಿ ಹಾಜರ್ಮಾಡಬೇಕೆಂದು ಕೋಲಾರ ಡಿಸ್ಟ್ರಿಕ್ಟು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ದಾರರುಗಳು ಇದರಿಂದ ಕೋರಲ್ಪಟ್ಟಿರುತ್ತಾರೆ.

ಎ. ಚೆಲುವಯ್ಯಂಗಾರ್,
ಟ್ರೆಜರೀ ಆಫೀಸರ್.

ತಾರೀಖು 30ನೇ ಜುಲೈ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗೋರಿಬಿನೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ವಿವರಿಸಿರುವ ರಿಜಿಸ್ಟ್ರಿಯ ತಂಸೂಕು ಬೇವಾರಸಾಗಿ ನಿಂತಿರುತ್ತ, ಅದನ್ನ ಹಾಜರ್ಮಾಡಿದವರೆ ಆಗಲಿ ಅದರಲ್ಲಿ ಬಾಧ್ಯತೆ ವುಳ್ಳವರೇ ಆಗಲಿ ಈ ಲಾಗಾಯತು 1 ತಿಂಗಳೊಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಜಬಿ ಫೀಜು ಪಾವತೀ ಮಾಡಿ ವಾಪಸು ಪಡಿಯಬಹುದು, ತಪ್ಪಿದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅದು ನಾಶವಾಗಿಹೋಗುವದು.